# ಕರ್ನಾಟಕ ರಾಜ್ಯ ಸರ್ಕಾರಿ ಅಂಧ ನೌಕರರ ಸಂಘ (ರಿ)

ನೋಂದಣಿ ಸಂಖ್ಯೆ: ಡಿ.ಆರ್.ಬಿ-I/ಎಸ್.ಒ.ಆರ್/216/2017-18 ಬೆಂಗಳೂರು ದಿನಾಂಕ: 21-07-2017

#41/ಬಿ, ಬಿ ಬ್ಲಾಕ್, ರೈನ್ಬೋ ಲೇಔಟ್, ವಡೇರಹಳ್ಳಿ, ವಿದ್ಯಾರಣ್ಯಪುರ ಅಂಚೆ,

ಬೆಂಗಳೂರು ಉತ್ತರ-560097

Email: ksgeab.kar@gmail.com Website: www.ksgeab.org ದೂರವಾಣಿ: 9343111176

ಸಂಖ್ಯೆ: ಸ್ವಾಭಿಮಾನ ಸಮಾನತೆ ಸ್ವಗೌರವ ದಿನಾಂಕ:18-03-2021

## ಚುನಾವಣಾ ಅಧಿಸೂಚನೆ

ವಿಷಯ : ಸದರಿ ಸಂಘದ ರಾಜ್ಯ ಕಾರ್ಯಕಾರಿ ಮಂಡಳಿಯ 12 ಮತ್ತು ಜಿಲ್ಲಾ ಸಂಘಟನಾ ಕಾರ್ಯದರ್ಶಿಗಳ 31 ಸ್ಥಾನಗಳಿಗೆ 2021-24 ನೇ ಸಾಲಿನ 3 ವರ್ಷಗಳ ಅವಧಿಗೆ ಚುನಾವಣಾ ಅಧಿಸೂಚನೆ ಹೊರಡಿಸುವ ಬಗ್ಗೆ.

ಉಲ್ಲೇಖ: ಸಂಘದ ನೋಂದಣಿ ಸಂಖ್ಯೆ, ಡಿ.ಆರ್.ಬಿ-I/ಎಸ್.ಒ.ಆರ್/216/2017-18 ಬೆಂಗಳೂರು ದಿನಾಂಕ: 21-07-2017

ಸಂಘದ ರಚನೆ ಮತ್ತು ಆಡಳಿತ ( ಬೈಲಾ ) ನಿಯಮಾನುಸಾರ ಈ ಮೇಲಿನ ವಿಷಯ ಹಾಗೂ ಉಲ್ಲೇಖದ ಅನುಸಾರ ಮುಖ್ಯ ಚುನಾವಣಾ ಅಧಿಕಾರಿಯಾಗಿ Dr. ಉಮಾದೇವಿ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿಜಯನಗರ ಬೆಂಗಳೂರು ಆದ ನಾನು ಮತ್ತು ಸಹ ಚುನಾವಣಾ ಅಧಿಕಾರಿಯಾಗಿ ನಾಗರಾಜು, ದ್ವಿತಿಯ ದರ್ಜೆ ಸಹಾಯಕರು ಉಪಖಜಾನೆ ಕುಣಿಗಲ್ ಪದನಾಮಗೊಂಡು ಕರ್ನಾಟಕ ರಾಜ್ಯ ಸರ್ಕಾರಿ ಅಂಧ ನೌಕರರ ಸಂಘ (ರಿ) ಬೆಂಗಳೂರು ಇದರ ರಾಜ್ಯ ಕಾರ್ಯಕಾರಿ ಮಂಡಳಿಯ 12 ಮತ್ತು ಜಿಲ್ಲಾ ಸಂಘಟನಾ ಕಾರ್ಯದರ್ಶಿಯ 31 ಸ್ಥಾನಗಳಿಗೆ 2021 ರಿಂದ 2024 ರ ಕ್ಯಾಲೆಂಡರ್ ವರ್ಷಕ್ಕೆ ಅನ್ವಯವಾಗುವಂತೆ 3 ವರ್ಷಗಳ ಕಾಲಾವಧಿಗೆ ಚುನಾವಣಾ ನಿಯಮಾವಳಿಗಳು ಹಾಗೂ ವೇಳಾ ಪಟ್ಟಿಯನ್ನು ಈ ಕೆಳಗಿನಂತೆ ಪ್ರಕಟಿಸುತ್ತಿದ್ದೇವೆ.

**[I.] ಸೂಚನೆಗಳು:** 1. ಪ್ರಸ್ತುತ ಚುನಾವಣೆಯಲ್ಲಿ ಸದರಿ ಸಂಘದ ಸದಸ್ಯತ್ವವನ್ನು ಪಡೆದ ಹಾಗೂ ಅರ್ಹ ಸದಸ್ಯರು ಮಾತ್ರ ಚುನಾವಣೆಯಲ್ಲಿ ಮತದಾನ ಮಾಡಬಹುದು.

2. ಸದರಿ ಸಂಘಟನೆಯ ಕಾರ್ಯಕಾರಿ ಮಂಡಳಿಯ ರಾಜ್ಯವ್ಯಾಪಿ 08 ಮತ್ತು ಆಯಾ ವಿಭಾಗವಾರು 04 ಸ್ಥಾನಗಳಿಗೆ ಮತ್ತು ೩೧ ಜಿಲ್ಲಾ ಸಂಘಟನಾ ಕಾರ್ಯದರ್ಶಿಗಳ ಸ್ಥಾನಗಳಿಗೆ ಈ ಚುನಾವಣೆಯು ಜರುಗಲಿದ್ದು, ಮತದಾನಕ್ಕೆ ಅರ್ಹತೆ ಪಡೆದಿರುವವರು ಸ್ಪರ್ಧಿಸಲು ನಾಮ ಪತ್ರವನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

3. ಒಬ್ಬ ವ್ಯಕ್ತಿ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಸ್ಥಾನಗಳಿಗೆ ಸ್ಪರ್ಧಿಸಲು ಮುಕ್ತನಾಗಿದ್ದು ಪ್ರತಿಯೊಂದು ಸ್ಥಾನಕ್ಕೆ ಪ್ರತ್ಯೇಕ ನಾಮ ಪತ್ರವನ್ನು ಸಲ್ಲಿಸಬೇಕು ಮತ್ತು ನಿಗದಿಪಡಿಸಿರುವ ಚುನಾವಣಾ ಶುಲ್ಕವನ್ನು ಕೂಡ ಪಾವತಿಸಬೇಕು..

4. ನಾಮಪತ್ರ ಸಲ್ಲಿಸುವ ಸ್ಪರ್ಧಾಳು ಚುನಾವಣಾ ನಿರ್ವಹಣೆಯ ಶುಲ್ಕವನ್ನು ನಾಮಪತ್ರ ಕಛೇರಿ ವಿಳಾಸಕ್ಕೆ ತಲುಪಿದ ನಂತರ ಪಾವತಿಸಬೇಕು. ಚುನಾವಣಾ ಮೊತ್ತವು ಕಾರ್ಯಕಾರಿ ಮಂಡಳಿಯ 12 ಸ್ಥಾನಗಳಿಗೆ 2000 ರೂಗಳು ಮತ್ತು 31 ಜಿಲ್ಲಾ ಸಂಘಟನಾ ಕಾರ್ಯದರ್ಶಿಗಳ ಸ್ಥಾನಗಳಿಗೆ 500 ರೂಗಳು.

# ಕರ್ನಾಟಕ ರಾಜ್ಯ ಸರ್ಕಾರಿ ಅಂಧ ನೌಕರರ ಸಂಘ (ರಿ)

ನೋಂದಣಿ ಸಂಖ್ಯೆ: ಡಿ.ಆರ್.ಬಿ-I/ಎಸ್.ಒ.ಆರ್/216/2017-18 ಬೆಂಗಳೂರು ದಿನಾಂಕ: 21-07-2017
#41/ಬಿ, ಬಿ ಬ್ಲಾಕ್, ರೈನ್ಬೋ ಲೇಔಟ್, ವಡೇರಹಳ್ಳಿ, ವಿದ್ಯಾರಣ್ಯಪುರ ಅಂಚೆ,
ಬೆಂಗಳೂರು ಉತ್ತರ-560097

Email: ksgeab.kar@gmail.com Website: www.ksgeab.org ದೂರವಾಣಿ: 9343111176


**ಚುನಾವಣಾ ನಿರ್ವಹಣೆಯ ಶುಲ್ಕವನ್ನು ಸಲ್ಲಿಸುವ ವಿಧಾನ:** ನಾಮ ಪತ್ರವು ಕಛೇರಿ ವಿಳಾಸಕ್ಕೆ ತಲುಪಿರುವುದು ಅಭ್ಯರ್ಥಿಗೆ ಖಚಿತವಾದ ತರುವಾಯವೇ ಶಿವಕುಮಾರ್ ಆರ್ ಸಿ, ಮೈಸೂರು ವಿಭಾಗೀಯ ನಿರ್ದೇಶಕರು, ಕರ್ನಾಟಕ ರಾಜ್ಯ ಸರ್ಕಾರಿ ಅಂಧ ನೌಕರರ ಸಂಘ ಇವರನ್ನು ಸಂಪರ್ಕಿಸಿ google ಅಥವ phone pay ಖಾತೆಗೆ ಚುನಾವಣಾ ಶುಲ್ಕವನ್ನು ಪಾವತಿಸತಕ್ಕದ್ದು ಮತ್ತು ಪಾವತಿಸಿದ್ದರ ಕುರಿತು ದೃಡೀಕರಣ ಸಂದೇಶವನ್ನು ಅಭ್ಯರ್ಥಿಗೆ ಕಳುಹಿಸಲಾಗುವುದು. ಶಿವಕುಮಾರ್ RC ರವರ ಮೊಬೈಲ್ ಸಂಖ್ಯೆ: 9060720937.

5. ಸ್ಪರ್ಧಾಳುಗಳು ತಮ್ಮ ನಾಮ ಪತ್ರವನ್ನು ಸದರಿ ಸಂಘದ ವಿಳಾಸಕ್ಕೆ Speed Post ಅಥವ Register Post ಮೂಲಕವೇ ಸಲ್ಲಿಸಬೇಕು. ನಾಮ ಪತ್ರ ಸಲ್ಲಿಕೆಗಾಗಿ ಸಾಕಷ್ಟು ಕಾಲಾವಕಾಶವನ್ನು ನಿಗಧಿಪಡಿಸಿದ್ದು, ನಿಗಧಿತ ಸಮಯದ ನಂತರ ಸಲ್ಲಿಕೆಯಾಗುವ ಅಥವಾ ತಲುಪುವ ನಾಮ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

6. ನಾಮ ಪತ್ರ ಹಿಂಪಡೆಯುವ ಅವಧಿಯಲ್ಲಿ ನಾಮ ಪತ್ರವನ್ನು ಸ್ಪರ್ಧಾಳು ಹಿಂತೆಗೆದುಕೊಂಡಲ್ಲಿ ಅಂಥವರ ಚುನಾವಣಾ ವೆಚ್ಚದ ಶುಲ್ಕವನ್ನು ಸಂಪೂರ್ಣವಾಗಿ ಮರುಪಾವತಿಸಲಾಗುತ್ತದೆ. ಚುನಾವಣೆಯಲ್ಲಿ ವಿಜೇತರಾಗುವ ಮತ್ತು ಪರಾಜಿತರಾಗುವ ಸ್ಪರ್ಧಾಳುಗಳಿಂದ ಸ್ವೀಕರಿಸಿದ ಚುನಾವಣಾ ಶುಲ್ಕಗಳನ್ನು ಮರುಪಾವತಿಸಲಾಗುವುದಿಲ್ಲ.

7. ಸದರಿ ಸಂಘದ ಅರ್ಹ ಮತದಾರನೊಬ್ಬ ಕಾರ್ಯಕಾರಿ ಮಂಡಳಿಯ ರಾಜ್ಯವ್ಯಾಪಿ `08, ತನ್ನ ವಿಭಾಗಿಯ ನಿರ್ದೇಶಕನ 01 ಮತ್ತು ತನ್ನ ಜಿಲ್ಲೆಯ ಸಂಘಟನಾ ಕಾರ್ಯದರ್ಶಿಯ 01 ಸ್ಥಾನಕ್ಕೆ ಅಂದರೆ ಒಟ್ಟು ಹತ್ತು ಸ್ಥಾನಗಳಿಗೆ ಮತಗಳನ್ನು ಚಲಾಯಿಸಲು ಅರ್ಹನಾಗಿರುತ್ತಾನೆ. ಮುಂದುವರೆದು ಮತದಾರರು ಒಂದು ಸ್ಥಾನಕ್ಕೆ ಒಂದೇ ಮತವನ್ನು ಚಲಾಯಿಸಲು ಹಕ್ಕು ಪಡೆದಿದ್ದು ಒಂದು ಸ್ಥಾನಕ್ಕೆ ಒಂದಕ್ಕಿಂತ ಹೆಚ್ಚಿನ ಮತಗಳನ್ನು ಚಲಾಯಿಸಿದರೆ ಆ ಮತವನ್ನು ಅಸಿಂಧುಗೊಳಿಸಲಾಗುತ್ತದೆ.

8. ಸದರಿ ಸಂಘದ ಬಹು ಅಂಗವೈಕಲ್ಯ ಹೊಂದಿರುವ ಅರ್ಹ ಮತದಾರರು ಬಯಸಿದಲ್ಲಿ ಮತಪತ್ರವನ್ನು ಪಡೆದುಕೊಂಡು ಬಹು ಅಂಗವೈಕಲ್ಯದ ಪ್ರಮಾಣ ಪತ್ರ ಮತ್ತು ಮತ ಪತ್ರವನ್ನು ಮುಚ್ಚಿದ ಲಕೋಟೆಯಲ್ಲಿ ನಂಬಿಗಸ್ತ ವ್ಯಕ್ತಿಯ ಮೂಲಕ ಚುನಾವಣಾಧಿಕಾರಿಗೆ ಮತದಾನದ ದಿನದಂದು ಮತದಾನ ಅಂತ್ಯಗೊಳ್ಳುವುದರೊಳಗೆ ಸಲ್ಲಿಸಬಹುದಾಗಿದೆ.

9. ಮತಗಟ್ಟೆಯ ಪರಿಸರದಲ್ಲಿ ಸುವ್ಯವಸ್ಥಿತ ಚುನಾವಣೆಗೆ ತೊಡಕಾಗುವಂತಹ ರೀತಿಯಲ್ಲಿ ವರ್ತನೆ, ಅಶಾಂತಿ, ಗೊಂದಲ ಇವೇ ಮೊದಲಾದ ಪ್ರತಿಕೂಲ ಗುಣಗಳನ್ನು ಉಂಟು ಮಾಡುವ ಯಾರೇ ಮತದಾರರು ಚುನಾವಣಾಧಿಕಾರಿ ಕೈಗೊಳ್ಳುವ ಶಿಸ್ತು ಕ್ರಮಕ್ಕೆ ಬದ್ಧರಾಗಿರತಕ್ಕದ್ದು.

10. ಮತದಾರರು ಮತಗಟ್ಟೆಗೆ ಮತದಾನಕ್ಕೆ ಆಗಮಿಸುವ ವೇಳೆ ಸಂಘದ ಗುರುತಿನ ಚೀಟಿ, ಓಟರ್ ಕಾರ್ಡ್, ಆಧಾರ್ ಕಾರ್ಡ್ ಅಥವಾ Pan Card ಇವುಗಳಲ್ಲಿ ಯಾವುದಾದರೊಂದರ ಮೂಲ ಪ್ರತಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

# ಕರ್ನಾಟಕ ರಾಜ್ಯ ಸರ್ಕಾರಿ ಅಂಧ ನೌಕರರ ಸಂಘ (ರಿ)

ನೋಂದಣಿ ಸಂಖ್ಯೆ: ಡಿ.ಆರ್.ಬಿ-I/ಎಸ್.ಒ.ಆರ್/216/2017-18 ಬೆಂಗಳೂರು ದಿನಾಂಕ: 21-07-2017

#41/ಬಿ, ಬಿ ಬ್ಲಾಕ್, ರೈನ್ಬೋ ಲೇಔಟ್, ವಡೇರಹಳ್ಳಿ, ವಿದ್ಯಾರಣ್ಯಪುರ ಅಂಚೆ,

ಬೆಂಗಳೂರು ಉತ್ತರ-560097

Email: ksgeab.kar@gmail.com Website: www.ksgeab.org ದೂರವಾಣಿ: 9343111176


**[II] ಚುನಾವಣಾ ಸ್ಥಳ ಮತ್ತು ದಿನಾಂಕ:**

ಸದರಿ ಸಂಘದ ಚುನಾವಣೆಯು ದಿನಾಂಕ 01-05-2021 ರಂದು ಮುಂಜಾನೆ 8 ಗಂಟೆಯಿಂದ ಅಪರಾಹ್ನ 1 ಗಂಟೆಯವರೆಗೆ ಜರುಗುತ್ತದೆ. ಚುನಾವಣೆ ಜರುಗುವ ಸ್ಥಳ ಬೆಂಗಳೂರಿನ ಗಾಂಧಿ ಭವನ.

**[III] ಚುನಾವಣಾ ವೇಳಾಪಟ್ಟಿ:**

1. ಚುನಾವಣಾ ಅಧಿಸೂಚನೆಯ ಪ್ರಕಟನೆ: 18-03-2021 ರ ಗುರುವಾರ.
2. ನಾಮಪತ್ರ ಸಲ್ಲಿಕೆಯ ಆರಂಭ: 01-04-2021 ಗುರುವಾರ.
3. ನಾಮಪತ್ರ ಸಲ್ಲಿಕೆಗೆ ಕೊನೆಯ ದಿನಾಂಕ: 17-04-2021ರ ಶನಿವಾರ.
4. ನಾಮಪತ್ರಗಳ ಪರಿಶೀಲನೆ: 18-04-2021 ರ ಭಾನುವಾರ.
5. ನಾಮಪತ್ರ ಹಿಂತೆಗೆಯುವಿಕೆ 19-04-2021ರ ಸೋಮವಾರ ದಿಂದ 24-04-2021ರ ಶನಿವಾರ ಸಂಜೆ ಐದು ಗಂಟೆಯವರೆಗೆ.
6. ಚುನಾವಣಾ ಕಣದಲ್ಲಿ ಉಳಿಯುವ ಅಭ್ಯರ್ಥಿಗಳ ಅಂತಿಮ ಪಟ್ಟಿಯ ಪ್ರಕಟಣೆ: 25-04-2021ರ ಭಾನುವಾರ.
7. ಮತದಾನದ ದಿನಾಂಕ: 01-05-2021ರ ಶನಿವಾರ ಮುಂಜಾನೆ 8 ಗಂಟೆಯಿಂದ ಅಪರಾಹ್ನ 1 ಗಂಟೆಯವರೆಗೆ.


Dr. UMADEVI
HOD
Department of Political Science
Government First Grade College
Vijayanagar, Bangalore - 104


8. ಮತಗಳ ಎಣಿಕೆ ಮತ್ತು ಫಲಿತಾಂಶ ಘೋಷಣೆ: 01-05-2021 ರಂದು 2 ಗಂಟೆಯ ಬಳಿಕ.

**(IV.) ಸದರಿ ಚುನಾವಣೆಗೆ ಲಭ್ಯವಿರುವ ಹುದ್ದೆಗಳು:**

(1) ಅಧ್ಯಕ್ಷರು (ಒಂದು ಹುದ್ದೆ) ಸಾಮಾನ್ಯ

(2) ಉಪಾಧ್ಯಕ್ಷರು (ಎರಡು ಹುದ್ದೆ 1 ಸಾಮಾನ್ಯ/ 1ಮಹಿಳೆಯರಿಗೆ ಮೀಸಲು)

(3) ಪ್ರಧಾನ ಕಾರ್ಯದರ್ಶಿ (ಒಂದು ಹುದ್ದೆ ಸಾಮಾನ್ಯ)

(4) ಕಾರ್ಯದರ್ಶಿ (ಒಂದು ಹುದ್ದೆ ಸಾಮಾನ್ಯ)

(5) ಸಂಘಟನಾ ಕಾರ್ಯದರ್ಶಿ (ಒಂದು ಹುದ್ದೆ ಸಾಮಾನ್ಯ)

(6) ಖಜಾಂಚಿ (ಒಂದು ಹುದ್ದೆ ಸಾಮಾನ್ಯ)

(7) ಮಹಿಳಾ ನಿರ್ದೇಶಕರು (ಒಂದು ಹುದ್ದೆ ಮಹಿಳಾ ಸದಸ್ಯರಿಗೆ ಮಾತ್ರ ಮೀಸಲು)

(8) ವಿಭಾಗೀಯ ನಿರ್ದೇಶಕರು (ನಾಲ್ಕು ಹುದ್ದೆ ಸಾಮಾನ್ಯರಿಗೆ) ಈ ಹುದ್ದೆಗಳಿಗೆ ಬೆಳಗಾವಿ, ಬೆಂಗಳೂರು, ಕಲ್ಬುರ್ಗಿ ಮತ್ತು ಮೈಸೂರು ಕಂದಾಯ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಹ ಮತದಾರರು ಸ್ಪರ್ಧಿಸತಕ್ಕದ್ದು ಮತ್ತು ತಮ್ಮ ವಿಭಾಗದ ನಿರ್ದೇಶಕರುಗಳನ್ನು ಚುನಾವಣೆಯ ಮೂಲಕ ಆಯ್ಕೆ ಮಾಡಿಕೊಳ್ಳತಕ್ಕದ್ದು.

# ಕರ್ನಾಟಕ ರಾಜ್ಯ ಸರ್ಕಾರಿ ಅಂಧ ನೌಕರರ ಸಂಘ (ರಿ)

ನೋಂದಣಿ ಸಂಖ್ಯೆ: ಡಿ.ಆರ್.ಬಿ-1/ಎಸ್.ಒ.ಆರ್/216/2017-18 ಬೆಂಗಳೂರು ದಿನಾಂಕ: 21-07-2017

#41/ಬಿ, ಬಿ ಬ್ಲಾಕ್, ರೈಲ್ವೇ ಲೇಔಟ್, ವಡೇರಹಳ್ಳಿ, ವಿದ್ಯಾರಣ್ಯಪುರ ಅಂಚೆ,

ಬೆಂಗಳೂರು ಉತ್ತರ-560097

Email: ksgeab.kar@gmail.com Website: www.ksgeab.org ದೂರವಾಣಿ: 9343111176


(9) ಜಿಲ್ಲಾ ಸಂಘಟನಾ ಕಾರ್ಯದರ್ಶಿಗಳು (31 ಹುದ್ದೆಗಳು ಸಾಮಾನ್ಯ.) ಈ ಹುದ್ದೆಗಳಿಗೆ ಆಯಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಮತದಾರರು ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತು ಚುನಾಯಿಸಲು ಅರ್ಹರು.

ಈ ಮೇಲಿನ ಅಧಿಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳನ್ನು ಕೆಲವೊಂದು ತುರ್ತು ಸಂದರ್ಭ ಅಥವಾ ಸನ್ನಿವೇಶಗಳನ್ನು ಹೊರತುಪಡಿಸಿ ಇನ್ಯಾವುದೆ ಕಾರಣಗಳಡಿ ಬದಲಾಯಿಸಲು ಅವಕಾಶವಿರುವುದಿಲ್ಲ. ಈ ಅಧಿಸೂಚನೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಕಾಲಕಾಲಕ್ಕೆ ಹಂಚಿಕೊಳ್ಳಲಾಗುವುದು.

ದಿನಾಂಕ: 18/03/2021 ಗುರುವಾರ,

ಸ್ಥಳ: ಬೆಂಗಳೂರು. ಸಹಿ

Dr. ಉಮಾದೇವಿ, ಮುಖ್ಯ ಚುನಾವಣಾ ಅಧಿಕಾರಿ

Dr.UMADEVI
HOD
Department of Political Science
Government First Grade College
Vijayanagar, Bangalore - 104

*****************